ಮಗ ಮನೆ ಬಿಟ್ಟು ಮೂರು ವರ್ಷದ ನಂತರ ಅಂದು ಸೊಸೆಯಿಂದ ಬಂದ ಇ – ಮೇಲ್ ರಾಗಿಣಿಯವರನ್ನು ಚಕಿತಗೊಳಿಸಿತು. "ಅತ್ತೆ, ಒಂದು ದಿನದ ಮಟ್ಟಿಗಾದರೂ ಇಲ್ಲಿಗೆ ಬಂದು ನಿಮ್ಮ ಮೊಮ್ಮಗನನ್ನು ನೋಡಿಕೊಂಡು ಹೋಗಿ. ಅವನಿಗಾಗಲೇ ಎರಡು ವರ್ಷ." ಇದು ನಿಜವೇ ಎನಿಸಿತು. ಹತ್ತಾರು ಬಾರಿ ಅದನ್ನು ಓದಿಕೊಂಡಳು; ಸವಿತಾಗೆ ಫಾರ್‌ವರ್ಡ್ ಮಾಡಿದಳು. ಆಕೆ ತಕ್ಷಣ ಉತ್ತರಿಸಿ, "ಅಮ್ಮಾ, ಈಗ ಯಾರ ಮಾತನ್ನೂ ಕೇಳಬೇಡ. ನೀನು ಮೂರು ವರ್ಷದಿಂದ ಹಾತೊರೆಯುತ್ತಿದ್ದಿ. ಈಗ ಅವಳೇ ಕರೀತಾಇದಾಳೆ. ಅಪ್ಪನ್ನ ಜತೆಗೆ ಕರೀಬೇಡ. ನೀನೊಬ್ಬಳೆ ಹೊರಡು" ಎಂದಳು. ಗಂಡ ಒಂದೂ ಮಾತಾಡದೇ ಪ್ರಯಾಣಕ್ಕೆ ಅನುಮತಿ ನೀಡಿದರು. ಹೆಂಡತಿ ಪಡುತ್ತಿದ್ದ ಬವಣೆಯನ್ನು ಅವರು ನೋಡಿದ್ದರು. ಇಲ್ಲವೆನ್ನಲು ಕಾರಣವೂ ಇರಲಿಲ್ಲ. ತಮ್ಮ ಸಿಬ್ಬಂದಿಗೆ ಹೇಳಿ ಬಿಸಿನೆಸ್ ಕ್ಲಾಸಿನಲ್ಲಿ ಟಿಕೆಟ್ ಮತ್ತು ಟೋಕಿಯೊದಲ್ಲಿ ಅತ್ಯಂತ ದುಬಾರಿ ಎನಿಸುವ ಹೋಟೆಲಿನಲ್ಲಿ ರೂಮನ್ನು ಬುಕ್ ಮಾಡಿಸಿದರು. ಓಪನ್ ಟಿಕೆಟ್ ಅದು. ರಾಗಿಣಿ ಎಷ್ಟು ದಿವಸ ಬೇಕಾದರೂ ಅಲ್ಲಿ ಇರಬಹುದಿತ್ತು. ಹೆಂಡತಿಗೆ ಸೂಚನೆ ಇತ್ತರು – "ಅವನೇನಾದರೂ ಅತಿ ಮಾತಾಡಿದರೆ ಒಂದು ನಿಮಿಷವೂ ಅಲ್ಲಿರಬೇಡ. ಓಪನ್ ಟಿಕೆಟ್ ಇದು. ತಕ್ಷಣ ಬಂದುಬಿಡು. ಅವಮಾನ ಸಹಿಸಿಕೊಂಡು ಅಲ್ಲಿರುವ ಅವಶ್ಯಕತೆ ಇಲ್ಲ. ಅವರನ್ನೇ ಹೋಟೆಲಿಗೆ ಕರೆಸಿಕೋ. ಅವರ ಮನೆಗೆ ಹೋಗುವ ಅಗತ್ಯವಿಲ್ಲ."

ಬೆಳಗಿನ ಜಾವ ನಿದ್ದೆ ಬಂದಿತ್ತು ರಾಗಿಣಿಯವರಿಗೆ. ಹೋಸ್ಟೆಸ್ ಬಂದು ಎಬ್ಬಿಸಿ ಹೇಳಿದಳು, "ಇನ್ನೇನು ಲ್ಯಾಂಡ್ ಆಗಲಿದೆ ವಿಮಾನ. ಎದ್ದು ಕುಳಿತುಕೊಳ್ಳಿ." ಹದಿನಾಲ್ಕು ಗಂಟೆ ಮುಗಿಯಿತಾ ಹಾಗಾದರೆ ಎಂದು ಎದ್ದು ಕುಳಿತರು. ಟೋಕಿಯೊ ಹೊರವಲಯದಲ್ಲಿರುವ ನಾರಿಟಾದಲ್ಲಿ ವಿಮಾನ ಕೆಳಗಿಳಿಯಿತು. ಹೊರಗೆ ತಮಗಾಗಿಯೇ ಲಿಮೋಸಿನ್ ಒಂದು ಕಾಯುತ್ತಿತ್ತು. ಅದನ್ನೇರಿ ಶಿಂಜುಕು ಎಂಬಲ್ಲಿನ ಹಿಲ್ಟನ್ ಹೋಟೆಲ್ ಸೇರಿದರು.

ತಮ್ಮ ರೂಮನ್ನು ತಲಪಿ, ಸ್ನಾನಮಾಡಿ ರಾಗಿಣಿ ಜೂಸ್, ಟೋಸ್ಟ್ ಮತ್ತು ಕಾಫಿಯನ್ನು ಅಲ್ಲಿಗೇ ತರಿಸಿಕೊಂಡರು. ಬ್ರೇಕ್ ಫಾಸ್ಟ್ ಆದ ನಂತರ ತಮ್ಮ ಐಪ್ಯಾಡನ್ನು ತೆಗೆದು ಮತ್ತೆ ಸೊಸೆಯ ಇ – ಮೇಲ್ ನೋಡಿಕೊಂಡರು. ಆಗಲೇ ಸಮಯ ಬೆಳಿಗ್ಗೆ ಹನ್ನೊಂದು ಗಂಟೆ. ರಿಂಕೊ ಕೊಟ್ಟಿದ್ದ ನಂಬರಿಗೆ ಫೋನ್ ಮಾಡಿದರು. ಯಾರು ಉತ್ತರಿಸುತ್ತಾರೋ ಎಂಬ ಆತಂಕ ಇದ್ದೇ ಇತ್ತು. ರಿಂಕೊ ಉತ್ತರಿಸಿದಳು.

"ರಿಂಕೊ, ನಾನು ಬಂದು ಹಿಲ್ಟನ್ ಹೋಟೆಲಿನಲ್ಲಿ ಇಳಿದುಕೊಂಡಿದ್ದೇನೆ. "

"ಯಾವಾಗ ಬಂದಿರಿ, ಅತ್ತೆ."

"ಇದೀಗ, ಬೆಳಿಗ್ಗೆ ಲ್ಯಾಂಡ್ ಆದೆ."

"ಇಲ್ಲೇ ಬರಬಹುದಿತ್ತು. ನೀವು ಇಷ್ಟು ಬೇಗ ಬರಬಹುದು ಎಂದುಕೊಂಡಿರಲಿಲ್ಲ."

"ಬೇರೆ ಕೆಲಸ ಇತ್ತು. ಅದಕ್ಕೇ ಇವತ್ತೇ ಬಂದೆ."

'ಬೇರೆ ಕೆಲಸ' ಒಂದು ಸುಳ್ಳು ಎಂಬುದು ಸೊಸೆಗೆ ಅರಿವಾಗದೇ ಹೋಗಲಿಲ್ಲ. ಅತ್ತೆ ಮುಂದುವರಿದರು,

"ಸುನಿಲ್ ಆಫೀಸಿಗೆ ಹೋಗಿದ್ದಾನಾ?"

"ಕೆಲಸದ ಮೇಲೆ ಒಸಾಕಾಕ್ಕೆ ಹೋಗಿದ್ದಾನೆ, ನಾಳೆ ಬರಬಹುದು. ಮತ್ತೊಂದು ದಿನ ಅಲ್ಲೇ ಇದ್ದರೂ ಇರಬಹುದು."